ಸಂಕೇತ ಸಂಖ್ಯೆ : **33-K** **ವಿಷಯ : ದ್ವಿತೀಯ ಭಾಷೆ — ಕನ್ನಡ**

**Code No. : 33-K Subject : Second Language — KANNADA**

**( ಹೊಸ ಪಠ್ಯಕ್ರಮ / New Syllabus )**

**( ಖಾಸಗಿ ಅಭ್ಯರ್ಥಿ / Private Fresh )**

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ಮೂರು ವಿಭಾಗಗಳನ್ನು ಹೊಂದಿದೆ.

ii) **ವಿಭಾಗ 'ಎ'**ಯಲ್ಲಿ ಗದ್ಯ ಮತ್ತು ಪದ್ಯಗಳ 68 ಅಂಕಗಳ ಒಟ್ಟಾರೆ 34 ಪ್ರಶ್ನೆಗಳಿವೆ.

iii) **ವಿಭಾಗ 'ಬಿ'**ಯಲ್ಲಿ ವ್ಯಾಕರಣಗಳ 15 ಅಂಕಗಳ ಒಟ್ಟಾರೆ 15 ಪ್ರಶ್ನೆಗಳಿವೆ.

iv) **ವಿಭಾಗ 'ಸಿ'**ಯಲ್ಲಿ ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲಗಳ 17 ಅಂಕಗಳ ಒಟ್ಟಾರೆ 7 ಪ್ರಶ್ನೆಗಳಿವೆ.

v) ಸೂಚನೆಗೆ ಅನುಸಾರ ಪ್ರತಿ ಪ್ರಶ್ನೆಗೂ ಉತ್ತರವನ್ನು, ಉತ್ತರಕ್ಕಾಗಿ ಮೀಸಲಿಟ್ಟ ಆಯಾ ಜಾಗದಲ್ಲೇ ಬರೆಯಬೇಕು.

vi) ಛಂದಸ್ಸನ್ನು ಹೊರತುಪಡಿಸಿ ಉಳಿದೆಲ್ಲೂ ಸೀಸದ ಕಡ್ಡಿ (ಪೆನ್ಸಿಲ್) ಯಲ್ಲಿ ಉತ್ತರ ಬರೆಯುವಂತಿಲ್ಲ. ಹಾಗೇನಾದರೂ ಬರೆದರೆ ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

vii) ಉತ್ತರಗಳು ನೇರವೂ, ಸ್ಪಷ್ಟವೂ ಆಗಿರಲಿ.

viii) ಪ್ರಶ್ನೆ ಪತ್ರಿಕೆಯನ್ನು ಓದಿ ಅರ್ಥೈಸಿಕೊಳ್ಳಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ix) ನಿಮ್ಮ ಪ್ರಶ್ನೋತ್ತರ ಕಿರುಪುಸ್ತಕದ ಬಲಭಾಗದಲ್ಲಿರುವ ಗೆರೆಯ ಪಕ್ಕದ ಖಾಲಿ ಜಾಗದಲ್ಲಿ ಯಾವುದೇ ರೀತಿಯ ಬರಹಗಳನ್ನು ಬರೆಯಬಾರದು.

## ವಿಭಾಗ – 'ಎ'

ಈ ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ : $12 \times 1 = 12$

1. ವಿಷದ ಬಾಣವು ಮರವನ್ನು ಏನು ಮಾಡಿತು ?
2. ಗಿಳಿಯ ತತ್ತ್ವನಿಷ್ಠೆ ಯಾವುದಾಗಿತ್ತು ?
3. ಕ್ರಿಕೆಟ್ ಆಟದ ಬಗ್ಗೆ ಜನರು ಮಾಡುವ ಅಪವಾದವೇನು ?
4. ಪ್ರವಾಹದ ಹಾವಳಿ ಹೆಚ್ಚಾಗಲು ಕಾರಣವೇನು ?
5. ರಾಮನ್‌ರವರ ಯಾವ ಮಾತು ಬೋಧಕರೆಲ್ಲರಿಗೂ ಆದರ್ಶವಾಗಿದೆ ?
6. ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತು ?
7. ಕೌರವ ಸೇನೆಯು ಉತ್ತರಕುಮಾರನಿಗೆ ಹೇಗೆ ಕಾಣಿಸಿತು ?
8. 'ಬಾಹುಬಲಿಗೆ ಭಯವಾಗುವುದಿಲ್ಲವೆ' ಎಂದು ಮಗು ಕೇಳಿದುದೇಕೆ ?
9. ಸುಗ್ಗಿ ಬಂದಾಗ ನೆಲದಮ್ಮ ಏನಾದಳು ?
10. ಯಾವುದಕ್ಕಾಗಿ ಹಗಲಿರುಳು ಹೋರಾಡಬೇಕು ?
11. ಸುರರ ಸತಿಯರ ಸ್ಥಾನವನ್ನು ಯಾರು ತುಂಬುತ್ತಾರೆ ?
12. ಪುನರ್ಜನ್ಮವಿದ್ದುದೇ ಆಗಿದ್ದಲ್ಲಿ ಪುಟ್ಟರಾಜರ ಬಯಕೆ ಏನಾಗಿತ್ತು ?

ಈ ಕೆಳಗಿನ ಪ್ರಶ್ನೆಗಳಿಗೆ **ಮೂರು** ಅಥವಾ **ನಾಲ್ಕು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : $13 \times 2 = 26$

13. ಗಿಳಿಯು ಇಂದ್ರನನ್ನು ಎಂತಹ ವರವನ್ನು ಕೇಳಿತು ?
14. ರಾಹುಲ್ ದ್ರಾವಿಡ್ ಅವರನ್ನು 'ಗೋಡೆ' ಎಂದು ಕರೆಯಲು ಕಾರಣವೇನು ?
15. ಪುಟ್ಟರಾಜ ಗವಾಯಿಯವರಿಗೆ ದೊರೆತಿರುವ ನಾಲ್ಕು ಪ್ರಶಸ್ತಿಗಳನ್ನು ಹೆಸರಿಸಿ.
16. ರಾಮನ್‌ರವರು ಸಂಶೋಧನೆಯ ವಿಚಾರದಲ್ಲಿ ತಮ್ಮ ಶಿಷ್ಯರಿಂದ ಏನನ್ನು ನಿರೀಕ್ಷಿಸುತ್ತಿದ್ದರು ?

17. ಕುರ್ಚಿಯ ಬಗ್ಗೆ ಜೋಯಿಸರು ಹೆಂಡತಿಗೆ ಇರುವ ಭಾವನಾತ್ಮಕ ಸಂಬಂಧ ಎಂತಹುದು ?

18. ಸಾವಿತ್ರಿಯು ಎರಡನೆಯ ಬಾರಿ ದೂರವಾಣಿಯ ಕಡೆಗೆ ಓಡಿದ್ದು ಏಕೆ ?

19. ಅಸಹಾಯಕ ಅಂಧರಿಗೆ ಯಾವ ಮಾತುಗಳಿಂದ ನೀವು ಧೈರ್ಯ ತುಂಬುವಿರಿ ?

20. ಬಾಹುಬಲಿಯೂ, ಮಗುವೂ ಒಂದೇ ಎಂದು ಸು.ರಂ. ಎಕ್ಕುಂಡಿಯವರು ಹೇಗೆ ಹೋಲಿಸಿದ್ದಾರೆ ?

21. ಸಿ.ಪಿ.ಕೆ.ಯವರು ಪ್ರತಿಯೊಬ್ಬನೂ ತನ್ನದಾದ ಕರ್ತವ್ಯವನ್ನು ಹೇಗೆ ಮಾಡಬೇಕೆನ್ನುತ್ತಾರೆ ?

22. ತೊಟ್ಟಿಲಿನಲ್ಲಿನ ಶಿಶುವನ್ನು ಕಂಡರೆ ತಾಯಿಯ ಹಸಿವು ಹೇಗೆ ಅಡಗುತ್ತದೆ ?

23. 'ಕಾದುನಡೆ' ಎಂದು ಅರ್ಜುನನು ಉತ್ತರಕುಮಾರನನ್ನು ಏಕೆ ಒತ್ತಾಯಿಸಿದನು ?

24. 'ತಪ್ಪಾತರೀ ಸಾಹೇಬರ' ಎಂದು ಅಜ್ಜ ಹೇಳಿದ್ದು ಏಕೆ ?

25. ಅಂತರಾತ್ಮವು ಯಾವಾಗ ಚೀರಿಕೊಳ್ಳುತ್ತದೆ ಎಂದು ಕವಯಿತ್ರಿಯು ಹೇಳಿದ್ದಾರೆ ?

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ : $4 \times 3 = 12$

26. "ಸಹ್ಯ ಪರ್ವತವೂ ಈಗ ಅಸಹ್ಯ ಪರ್ವತವಾಗಿದೆ"

27. "ನಿನ್ನಲ್ಲಿ ಹತ್ತು ಕಿಲೋವಾಟ್ ಶಕ್ತಿಯ ಬುದ್ಧಿ ಇದೆ"

28. "ಇದ್ದಿ, ನೀನು ಇದ್ದೀ, ನೀನು ಇರಬೇಕು"

29. "ಕಲಕೇರಿ ತೇರಿನ ಮಾಟ ಬಲುಮಾಟ"

ಈ ಕೆಳಗಿನ ಸಾಹಿತಿಗಳ ಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ಬರೆಯಿರಿ : $2 \times 3 = 6$

30. ಕುವೆಂಪು

31. ಬಸವರಾಜ ಸಾದರ

32. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : $1 \times 4 = 4$

ವೇಷದಂತಾಚರಣೆ ಇಲ್ಲದನ್ನಕ್ಕ

________________________ ಕಪಿಲಸಿದ್ಧ ಮಲ್ಲಿಕಾರ್ಜುನ.

***ಅಥವಾ***

ಧನವಿದ್ದು ಫಲವೇನು________________________

________________________ ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನ.

ಈ ಕೆಳಗಿನ ಪ್ರಶ್ನೆಗಳಿಗೆ **ಎಂಟು** ಅಥವಾ **ಹತ್ತು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

33. ಅಜ್ಜನು ಸಾಹೇಬರ ಮನೆಗೆ ಹೋಗಬೇಕಾಗಿ ಬಂದ ಘಟನೆಯನ್ನು ವಿವರಿಸಿ.

***ಅಥವಾ***

ಪ್ರಾಮಾಣಿಕ ಶಿಕ್ಷಕನಿಗೆ ದೊರೆತ ಗೌರವವು ನೊಬೆಲಿಗೆ ಸಮಾನ ಎನಿಸಿದ್ದು ಹೇಗೆ ? ವಿವರಿಸಿ.

34. ಮಾನವತೆಯ ಸಾರ್ಥಕತೆಯನ್ನು ಗುರಿ ಕವನದಲ್ಲಿ ಹೇಗೆ ವರ್ಣಿಸಲಾಗಿದೆ ? ವಿವರಿಸಿ.

***ಅಥವಾ***

ಜೀವನದ ಪರಮ ಗುರಿಯನ್ನು ಕುರಿತು 'ಗುರಿ' ಪದ್ಯವು ನೀಡುವ ಸಂದೇಶವನ್ನು ವಿವರಿಸಿ.

## ವಿಭಾಗ – 'ಬಿ'

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

35. 'ದೂರ' ಪದದ ವಿರುದ್ಧಾರ್ಥಕ ರೂಪ

(ಎ) ಸುದೂರ (ಬಿ) ದೂರವಿಲ್ಲದ

(ಸಿ) ಹತ್ತಿರ (ಡಿ) ಹರೆದಾರಿ

36. 'ಮನೆಮಠ' ಎಂಬ ಪದವು ಇದಕ್ಕೆ ಉದಾಹರಣೆ

(ಎ) ದ್ವಿರುಕ್ತಿ (ಬಿ) ಜೋಡುನುಡಿ

(ಸಿ) ನುಡಿಗಟ್ಟು (ಡಿ) ಅವ್ಯಯ

37. ಈ ಪದವು ಗುಣಸಂಧಿಗೆ ಉದಾಹರಣೆಯಾಗಿದೆ

(ಎ) ಓಡೋಡಿ (ಬಿ) ಪ್ರತ್ಯೇಕ

(ಸಿ) ಗಣೇಶ (ಡಿ) ಹರೀಶ

38. 'ಕಾರ್ಯ' ಪದದ ತದ್ಭವ ರೂಪ

(ಎ) ಕಾಯ (ಬಿ) ಕೆಲಸ

(ಸಿ) ಕಾರ್ಯ (ಡಿ) ಕಜ್ಜ

39. 'ಹೆಬ್ಬೆರಳು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

(ಎ) ಕ್ರಿಯಾ (ಬಿ) ತತ್ಪುರುಷ

(ಸಿ) ಕರ್ಮಧಾರಯ (ಡಿ) ದ್ವಂದ್ವ

40. 'ಮನೆಯನ್ನು' ಈ ಪದವು ಯಾವ ವಿಭಕ್ತಿಯಾಲ್ಲಿದೆ ?

(ಎ) ಪ್ರಥಮ (ಬಿ) ತೃತೀಯ

(ಸಿ) ಚತುರ್ಥಿ (ಡಿ) ದ್ವಿತೀಯ

41. 'ಸಾಲಿ' ಪದದ ಗ್ರಾಂಥಿಕ ರೂಪವಿದು

(ಎ) ಸಲಿ (ಬಿ) ಶಾಲೆ

(ಸಿ) ಶಲೆ (ಡಿ) ಸಳಿ

42. ಆರು ಪಾದ (ಸಾಲು)ಗಳುಳ್ಳ ಪದ್ಯವನ್ನು ಹೀಗೆ ಕರೆಯುತ್ತೇವೆ

(ಎ) ದ್ವಿಪದಿ (ಬಿ) ತ್ರಿಪದಿ

(ಸಿ) ಚೌಪದಿ (ಡಿ) ಷಟ್ಪದಿ

43. 'ಮುಖಚಂದ್ರ' ಈ ಪದದಲ್ಲಿರುವ ಅಲಂಕಾರ ಯಾವುದು ?

(ಎ) ಉಪಮ (ಬಿ) ರೂಪಕ

(ಸಿ) ದೀಪಕ (ಡಿ) ಅನುಪ್ರಾಸ

44. 'ಮಿಸುಪ' ಪದದ ಅರ್ಥವಿದು

(ಎ) ಹೊಳೆಯುವ (ಬಿ) ಸುಳ್ಳು

(ಸಿ) ಜಿಪುಣ (ಡಿ) ಚಾಡಿಕೋರ

45. ಇದು ಸರ್ವನಾಮ ಪದಕ್ಕೆ ಉದಾಹರಣೆಯಾಗಿದೆ

(ಎ) ರಾಮ (ಬಿ) ತಿನ್ನು

(ಸಿ) ಅವನು (ಡಿ) ಜಳಜಳ

46. ನುಡಿಗಟ್ಟಿಗೆ ಉದಾಹರಣೆ ಇದಾಗಿದೆ

(ಎ) ಬೆನ್ತಟ್ಟು (ಬಿ) ಸರಸರ

(ಸಿ) ದೀನದಲಿತ (ಡಿ) ಬೇಗಬೇಗ

47. ಕ್ರಿಯಾಪದದ ಮೂಲ ರೂಪಕ್ಕೆ ಹೀಗೆನ್ನುತ್ತೇವೆ

(ಎ) ನಾಮಪ್ರಕೃತಿ (ಬಿ) ಧಾತು

(ಸಿ) ಕೃದಂತ (ಡಿ) ತದ್ಧಿತ

48. 'ತಾಯಿ' ಪದದ ಬಹುವಚನ ರೂಪ

(ಎ) ತಾಯಿಗಳು (ಬಿ) ತಾಯಿಯರು

(ಸಿ) ತಾಯಿಯರುಗಳು (ಡಿ) ತಾಯಿಯಂದಿರು

49. 'ಹರೀಶನು ಶಾಲೆಗೆ ಬಂದನು' ಈ ವಾಕ್ಯವು ಯಾವ ಕಾಲದಲ್ಲಿ ಪ್ರಯೋಗವಾಗಿದೆ ?

(ಎ) ಭೂತ (ಬಿ) ಭವಿಷ್ಯತ್

(ಸಿ) ವರ್ತಮಾನ (ಡಿ) ಗುಳಿಕಾಲ

## ವಿಭಾಗ – ಸಿ

ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : $4 \times 1 = 4$

ಒಂದು ಊರಿನಲ್ಲಿ ಒಬ್ಬ ಬಡ ರೈತನಿದ್ದನು. ಆತನು ಸಾಂಪ್ರದಾಯಿಕ ಸಾವಯವ ಕೃಷಿಯನ್ನು ಮಾಡುತ್ತಿದ್ದನು. ತಾನು ಬೆಳೆಯುತ್ತಿದ್ದ ಬೆಳೆ ಅಧಿಕ ಇಳುವರಿಯನ್ನು ಕೊಡುತ್ತಿರಲಿಲ್ಲ. ಇದರಿಂದ ರೈತನು ತೊಂದರೆಗೊಳಗಾಗಿ ನಿರುತ್ಸಾಹನಾದನು. ಆದರೂ ಕೆಲವು ವರ್ಷಗಳ ಕಾಲ ಸಾವಯವಗೊಬ್ಬರದಿಂದ ಬೆಳೆದ ಬೆಳೆಗಳ ಉಪಯೋಗದಿಂದ ಸದೃಢ ಹಾಗೂ ಶಾಂತ ಚಿತ್ತದಿಂದ ಕಾಲ ಕಳೆದನು. ದಿನಗಳೆದಂತೆ ನೆರೆ–ಹೊರೆಯ ರೈತರು ವೈಜ್ಞಾನಿಕ ವ್ಯವಸಾಯ ಪದ್ಧತಿಯಿಂದ ಅಧಿಕ ಇಳುವರಿ ಪಡೆದು ಆರ್ಥಿಕವಾಗಿ ಸಂಪತ್ತಿನಿಂದ ಕೂಡಿ ಸಂತಸ ಪಡುತ್ತಿದ್ದರು.

ಹೀಗೆ ಹಲವು ವರ್ಷಗಳ ನಂತರ ನೆರೆಹೊರೆಯ ರೈತರು ಹಲವು ರೋಗಗಳಿಗೆ ತುತ್ತಾಗಿ ನರಳಿ ದುಃಖ ಪಡುವಂತೆ ಆಯಿತು. ಇದಕ್ಕೆ ಕಾರಣ ಅವರು ಬೆಳೆಗೆ ಬಳಸುತ್ತಿದ್ದ ರಾಸಾಯನಿಕ ಗೊಬ್ಬರ, ಕೀಟನಾಶಕಗಳೇ ಕಾರಣವಾಗಿದ್ದವು.

*ಪ್ರಶ್ನೆಗಳು :*

50. ಬಡ ರೈತನು ಮಾಡುತ್ತಿದ್ದ ಕೃಷಿ ಪದ್ಧತಿ ಯಾವುದು ?

51. ನೆರೆಹೊರೆಯ ರೈತನು ಯಾವ ವಿಧದ ವ್ಯವಸಾಯ ಪದ್ಧತಿಯನ್ನು ಅನುಸರಿಸುತ್ತಿದ್ದರು ?

52. ಆಧುನಿಕ ಕೃಷಿ ಪದ್ಧತಿಯ ಬೆಳೆಗಳ ಉಪಯೋಗದಿಂದ ಆದ ದುಷ್ಪರಿಣಾಮಗಳೇನು ?

53. ಬಡ ರೈತನು ಸದೃಢವಾಗಿರಲು ಕಾರಣವೇನು ?

54. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ***ಒಂದನ್ನು*** ಆರಿಸಿಕೊಂಡು ಸೂಕ್ತ ನಿದರ್ಶನದೊಂದಿಗೆ ಸಮರ್ಥಿಸಿ : $1 \times 3 = 3$

* ಬೆಳ್ಳಗಿರುವುದೆಲ್ಲ ಹಾಲಲ್ಲ
* ಹಾಸಿಗೆ ಇದ್ದಷ್ಟು, ಕಾಲು ಚಾಚು
* ಕೈಕೆಸರಾದರೆ ಬಾಯಿ ಮೊಸರು

55. ಧಾರವಾಡದಲ್ಲಿ ಓದುತ್ತಿರುವ ದರ್ಶನ್/ಅಯೇಷಾ, 10ನೇ ತರಗತಿ, ಸರ್ಕಾರಿ ಪ್ರೌಢಶಾಲೆ, ಜಯನಗರ ಎಂದು ತಿಳಿದು, ನಿಮ್ಮ ಶಾಲೆಯಲ್ಲಿ ಕೈಗೊಂಡ ಸ್ವಚ್ಛತಾ ಕಾರ್ಯಕ್ರಮದ ಬಗ್ಗೆ ದೂರದ ಬಳ್ಳಾರಿಯಲ್ಲಿರುವ ನಿಮ್ಮ ಗೆಳೆಯ/ಗೆಳತಿ ಪ್ರದೀಪ/ಕೌಸರ್, 10ನೇ ತರಗತಿ ಸರ್ಕಾರಿ ಪ್ರೌಢಶಾಲೆ, ಬೆಳಗಾವಿ ಇವರಿಗೆ ಒಂದು ಪತ್ರ ಬರೆಯಿರಿ. $1 \times 5 = 5$

***ಅಥವಾ***

ರಾಜಾಜಿನಗರ, 3ನೇ ಬ್ಲಾಕ್ ಬಳ್ಳಾರಿಗೆ ಸೇರಿದ ಬಡಾವಣೆಯಲ್ಲಿನ ಹಾಳಾಗಿರುವ ರಸ್ತೆ ದುರಸ್ಥಿಯ ಬಗೆಗೆ ಆಯುಕ್ತರು, ನಗರಸಭೆ, ಬಳ್ಳಾರಿ ಇವರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

56. ಈ ಕೆಳಗಿನ ಯಾವುದಾದರೂ ***ಒಂದು*** ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಮೀರದಂತೆ ಒಂದು ಪ್ರಬಂಧ ಬರೆಯಿರಿ : $1 \times 5 = 5$

- ಪರಿಸರ ಸಂರಕ್ಷಣೆಯ ಇಂದಿನ ಅಗತ್ಯ
- ಸಂಪರ್ಕ ಮಾಧ್ಯಮಗಳಲ್ಲಿ ದೂರದರ್ಶನದ ಪಾತ್ರ
- ಗಣಕಯಂತ್ರದ ಪ್ರಯೋಜನಗಳು